# ಕರಾವಳಿಯಲ್ಲಿ 'ಚಿಲ್ಲಿಂಗ್' ಹವಾ!

ಶರಣ್ ಚಿಲಿಂಬಿ ಪಾಡ್‌ಕಾಸ್ಟ್ ಸರಣಿ ಶತಕ ಬಾರಿಸಿದೆ. ಅದು ಯೂಟ್ಯೂಬ್, ಫೇಸ್‌ಬುಕ್, ಸ್ಪಾಟಿಫೈ ಮೂಲಕ ಹೊರರಾಜ್ಯ, ಹೊರದೇಶಗಳಲ್ಲಿರುವ ತುಳುಭಾಷಿಕರ ಮನಗೆದ್ದಿದೆ.

■ ಸಂಧ್ಯಾ ಹೆಗಡೆ



'ಚಿಲ್ಲಿಂಗ್ ವಿಥ್ ಚಿಲಿಂಬಿ' ಮತ್ತು ದಿ ಪವರ್‌ಹೌಸ್ ವೈನ್ಸ್‌ನ (The Powerhouse Vines) 'ಪವರ್‌ಹೌಸ್ ಕಿಚನ್' ಬಗ್ಗೆ ಗೊತ್ತಿಲ್ಲದ ತುಳುವರು ಇರಲಿಕ್ಕಿಲ್ಲ ಬಹುಶಃ.

ತುಳುನಾಡಿನಲ್ಲಿ ಸದ್ದು ಮಾಡಿರುವ ಈ ಎರಡು ಕಾರ್ಯಕ್ರಮಗಳ ಮುಖ್ಯ ರೂವಾರಿ ಮಂಗಳೂರಿನ ಶರಣ್ ಚಿಲಿಂಬಿ. 'ಚಿಲ್ಲಿಂಗ್ ವಿಥ್ ಚಿಲಿಂಬಿ' ಪಾಡ್‌ಕಾಸ್ಟ್ ಕರಾವಳಿಯಲ್ಲಿ ಮನೆಮಾತು. 'ಪವರ್‌ಹೌಸ್ ಕಿಚನ್' ಕೂಡ ಅಷ್ಟೇ ಪ್ರಚಲಿತ.

ಕರಾವಳಿಯ ಮಣ್ಣಿನ ಸೈನಿಕರು, ಸಮಾಜ ಸೇವಕರು, ಕಲಾವಿದರು, ರಂಗಕರ್ಮಿಗಳು, ಗಾಯಕರು, ನಟರು, ಉದ್ಯಮಿಗಳು, ವೈದ್ಯರು, ರಾಜಕಾರಣಿಗಳು, ಲಿಂಗತ್ವ ಅಲ್ಪಸಂಖ್ಯಾತರು, ರಿಕ್ಷಾ ಚಾಲಕರು, ಅಂಧರು, ಸಾಧಕರು ಹೀಗೆ ಹೆಸರಾಂತ ವ್ಯಕ್ತಿಗಳನ್ನು ಸಂದರ್ಶಿಸಿ, ತಮ್ಮ ಹಾವಭಾವ, ಬಿರಿಯುವ ನಗು, ಮೊನಚು ಪ್ರಶ್ನೆಗಳ ಮೂಲಕ ಮೋಡಿ ಮಾಡಿದವರು ಶರಣ್. ತೆರೆಮರೆಯ ತುಳು ಪ್ರತಿಭೆಗಳನ್ನು ಸಮಾಜಕ್ಕೆ ಪರಿಚಯಿಸಿದ ಹೆಗ್ಗಳಿಕೆಯೂ ಅವರದು.

ಡ್ಯಾನ್ಸರ್ ಆಗಿರುವ ಶರಣ್ ಕಾಲೇಜು ದಿನಗಳಲ್ಲೇ ವಿಡಿಯೊಗಳಲ್ಲಿ ಮಿಂಚಿದವರು. ಹವ್ಯಾಸಕ್ಕಾಗಿ ಮಾಡುತ್ತಿದ್ದ ವಿಡಿಯೊಗಳು ವಾಟ್ಸ್‌ಆ್ಯಪ್ ಸ್ಟೇಟಸ್ ಏರಲಾರಂಭಿಸಿದವು. ವೀಕ್ಷಕರು ಹೆಚ್ಚಾದಂತೆ ಅವರಿಗೆ ವಿಡಿಯೊಗಳ ಮೇಲಿನ ವ್ಯಾಮೋಹವೂ ಹೆಚ್ಚುತ್ತ ಹೋಯಿತು.

'ಶುರುವಿನಲ್ಲಿ ರ್‍ಯಾಂಟ್ ವಿಡಿಯೊಗಳನ್ನು ಮಾಡುತ್ತಿದ್ದೆ. ಯಾವುದಾದರೊಂದು ಪ್ರಚಲಿತ ವಿಷಯ ಆಯ್ದುಕೊಂಡು ನಿರರ್ಗಳವಾಗಿ ಮಾತನಾಡುವ ಕಲೆಯನ್ನು ರ್‍ಯಾಂಟ್ ವಿಡಿಯೊಗಳು ಕಲಿಸಿದವು. ನಂತರ ಬಂದವು 'ಬ್ರೊss' ವಿಡಿಯೊಗಳು. 'ಬ್ರೊss' ಇಲ್ಲದೆ ಸಂಭಾಷಣೆಯೇ ಮುಂದಕ್ಕೆ ಹೋಗದೆಂಬಷ್ಟು ಮೋಡಿ ಮಾಡಿತ್ತು ಆಗ ಆ ಪದ. ಆ ವಿಡಿಯೊಗಳು ಕೂಡ ಕ್ಲಿಕ್ ಆದವು. ಕೋವಿಡ್–19ರ ಲಾಕ್‌ಡೌನ್ ವೇಳೆಗೆ ಯೂಟ್ಯೂಬ್ ಎಂಬ ವಿಸ್ಮಯ ಲೋಕದೊಳಗೆ ರಂಗಪ್ರವೇಶ ಮಾಡಿದೆ' ಎನ್ನುತ್ತ ಶರಣ್ ತಮ್ಮ ಡಿಜಿಟಲ್ ರಂಗಪಯಣದ ಕಥೆ ಮುಂದುವರಿಸಿದರು.

ತಲ್ಲಣ ಸೃಷ್ಟಿಸಿದ್ದ ಕೋವಿಡ್ ಎಂಬ ದುರಿತ ಕಾಲದಲ್ಲಿ ಜನರ ದುಗುಡಗಳನ್ನು ಕ್ಷಣಹೊತ್ತು ಹಗುರಗೊಳಿಸಿದ ಕೆಲವೇ ಸಂಗತಿಗಳಲ್ಲಿ 'ಡಲ್ಗೊನಾ ಕಾಫಿ'ಯೂ ಒಂದು. ಈ ಡಲ್ಗೊನಾ ಕಾಫಿ ತಯಾರಿಸಿದ ವಿಡಿಯೊ ಪೋಸ್ಟ್ ಮಾಡಿದಾಗ, ತುಂಬಾ ವೀಕ್ಷಣೆಗಳು ಸಿಕ್ಕವು. ಇದು ಅಡುಗೆಯೆಂಬ ಸೃಜನಶೀಲ ಕಲೆಯೆಡೆಗೆ ಹೊರಳಲು ಪ್ರೇರಣೆಯಾಯಿತು. ಇಲ್ಲಿಂದಲೇ ಪ್ರಾರಂಭವಾಗಿದ್ದು 'ಪವರ್‌ಹೌಸ್ ಕಿಚನ್' ಕುಕ್ಕಿಂಗ್ ಶೋ. ಸ್ನೇಹಿತರೇ ಸೇರಿ ಮಾತು, ನಗು, ಹರಟೆಯೊಂದಿಗೆ ಶುರು ಮಾಡಿದ ಅಡುಗೆ ಸರಣಿ ಈ ಕುಕ್ಕಿಂಗ್ ಶೋ ಎಂದು ಅವರು ತಮ್ಮ ಕನಸೊಂದು ಮೂರ್ತ ರೂಪ ತಳೆದ ಬಗೆಯನ್ನು ವಿವರಿಸಿದರು.

ನಂತರ ಪ್ರಸಿದ್ಧಿ ಪಡೆದ ಪವರ್‌ಹೌಸ್ ಕಿಚನ್‌ನಲ್ಲಿ ಕುಡ್ಲದ ಪ್ರಸಿದ್ಧ ಶೆಫ್‌ಗಳು, ಹೋಟೆಲ್ ಮಾಲೀಕರು, ತುಳು ರಂಗಭೂಮಿಯ ಕಲಾವಿದರು, ಚಿತ್ರನಟ–ನಟಿಯರು ಸೌಟು ಹಿಡಿದಿದ್ದಾರೆ. ಈ ಕಾರ್ಯಕ್ರಮವು ಹಾಸ್ಯ ಮತ್ತು ಅಡುಗೆಯ ರಸಪಾಕ.

ತುಳುನಾಡಿನ ಜನರು ಮನರಂಜನೆ, ಕಾಮಿಡಿ ಶೋಗಳನ್ನು ಹೆಚ್ಚು ಇಷ್ಟಪಡುವ ಕಾರಣಕ್ಕೆ ರೂಪಿಸಿದ ಈ ಪ್ರಯೋಗ ಯಶಸ್ಸು ಕಂಡಿತು ಎನ್ನುತ್ತಾರೆ ಶರಣ್.

ಹೊಸ ತಲೆಮಾರಿನವರಿಗೆ ನಮ್ಮ ನೆಲದ ಪ್ರತಿಭೆಗಳೇ ಪ್ರೇರಣೆಯಾಗಬೇಕು, ನಮ್ಮವರನ್ನು ನಾವು ಪರಿಚಯಿಸಬೇಕು, ಅವರೇ ನಮ್ಮ ಮಕ್ಕಳಿಗೆ